I	SMALL SCALE INDUSTRIES	
	13. April	655
	14. May	933
II	LARGE & MEDIUM INDSTRIES	4 (upto June 1985)

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು), (ಮಾನ್ಯ ಜೆ. ಹೆಚ್. ಪಟೀಲರವರ ಪರವಾಗಿ).—ಮಾನ್ಯ ಅಧ್ಯಕ್ಷರೇ, I beg to lay the Annual Report of M/s Karnataka State Handicrafts Development Corporation Ltd. for the year ending 31-3-1982.

MR. SPEAKER.—Paper laid.

ಗಮನ ಸೆಳೆಯುವ ಸೂಚನೆ

ಎಸ್.ಸಿ./ಎಸ್.ಟಿ. ಯಲ್ಲದವರು ಒಂದು ಸಂಘವನ್ನು ಮಾಡಿರುವುದರಿಂದ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ I call the attention of the Chief Minister to the formation of the "NON-SC/ST ASSOCIATION" thereby creating differences among different sections of the people. ಒಂದು ಬೇಸಿಕ್ ಪಾಯಿಂಟ್ ಏನೆಂದರೆ, ಚೀಫ್ ಮಿನಿಸ್ಟರ್ ಉತ್ತರ ಕೊಡ ಬೇಕೆಂದು ನಾನು ಕಾಲಿಂಗ್ ಅಟೆನ್‌ಷನ್ ಹಾಕಿದ್ದೆ. ಮಾನ್ಯ ಮುಖ್ಯಮಂತ್ರಿಗಳ ಹೆಸರಿನಲ್ಲೇ ಹಾಕಿದ್ದೆ.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ಉತ್ತರ ಹೇಳುತ್ತೇನೆ.

ಅಧ್ಯಕ್ಷರು.—ಸ್ಟೇಟ್‌ಮೆಂಟ್ ತಯಾರಾಗಿದೆ, ಅದರ ಕಾಪಿಯನ್ನು ತಮಗೆ ಕೊಟ್ಟಿದ್ದಾರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಕಾಪಿ ಬಂದಿದೆ. ಆದರೆ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಇದು ಸಂಬಂಧಪಟ್ಟಿದ್ದರೆ, ನಾನು ಸೋಶಿಯಲ್ ವೆಲ್‌ಫೇರ್ ಮಿನಿಸ್ಟರ್ ಎಂದು ಬರೆಯುತ್ತಿದ್ದೆ, ಮುಖ್ಯಮಂತ್ರಿ ಎಂದು ಬರೆಯುವ ಅವಶ್ಯಕತೆ ಇರಲಿಲ್ಲ.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ನೀವು ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿವಾಸಿಜಾತಿಯೇತರ ಸಂಘದ ರಚನೆ ಮತ್ತು ಅದರಿಂದಾಗಿ ವಿವಿಧ ವರ್ಗದ ಜನರಲ್ಲಿ ಭಿನ್ನಾಭಿಪ್ರಾಯ ಗಳನ್ನುಂಟುಮಾಡುತ್ತಿರುವ ವಿಚಾರದ ಬಗ್ಗೆ ಸಮಾಜ ಕಲ್ಯಾಣ ಮಂತ್ರಿಯವರ ಗಮನವನ್ನು ಸೆಳೆದಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನ್ ಎಸ್.ಸಿ., ಎಸ್.ಟಿ. ಎಂದು ಬರೆದಿದ್ದೇನೆ. ಅದನ್ನು ಕನ್ನಡದಲ್ಲಿ ತೆಗೆದುಹಾಕಿದ್ದಾರೆ.

ಅಧ್ಯಕ್ಷರು.—ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಅವರು, ಅವರು ಉತ್ತರ ಹೇಳುವುದಕ್ಕೆ ತಯಾರಾಗಿದ್ದಾರೆ. ನೀವು ಅವರ ಗಮನ ಸೆಳೆದಿದ್ದೀರಿ, ಅವರು ಉತ್ತರ ಹೇಳುತ್ತಾರೆ. ಮತ್ತೆ ಬೇಕಾದರೆ ಮುಖ್ಯಮಂತ್ರಿಗಳ ಗಮನ ಸೆಳೆಯಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದೇನೆ.